THE HINDU

Page No. 11

# NEET to be held on May 5 next year

SPECIAL CORRESPONDENT
NEW DELHI

The NEET (UG) examination, 2019, will be conducted in pen and paper mode in a single session on May 5, 2019.

The registration will take place from November 1 to 30, 2018.

The admit cards can be downloaded on April 15, 2019 and the result will be announced on June 5, 2019.

The National Testing Agency, which will conduct the exam now, said the test would be held in the same number of languages as last year.

# ನೀಟ್: ಒಮ್ಮೆಯಷ್ಟೆ ಪರೀಕ್ಷೆ

ನವದೆಹಲಿ: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ವರ್ಷದಲ್ಲಿ ಎರಡು ಬಾರಿ ಆನ್‌ಲೈನ್ ಮೂಲಕ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಸುವ ನಿರ್ಧಾರವನ್ನು ಕೇಂದ್ರ ಸರ್ಕಾರ ಹಠಾತ್ ಕೈಬಿಟ್ಟಿದೆ.

ಕಂಪ್ಯೂಟರ್ ಆಧಾರಿತ ಅಥವಾ ಆನ್‌ಲೈನ್ ಪರೀಕ್ಷೆ ನಡೆಸುವ ಬದಲು ಈ ಮೊದಲಿನಂತೆ ವರ್ಷಕ್ಕೆ ಒಂದೇ ಬಾರಿ ಪೆನ್ ಮತ್ತು ಪೇಪರ್ ಮಾದರಿಯಲ್ಲಿ 'ನೀಟ್' ನಡೆಸುವುದಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ ಪ್ರಕಟಿಸಿದೆ.

ಕಳೆದ ಬಾರಿ ಎಷ್ಟು ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಪ್ರಕಟಿಸಲಾಗಿತ್ತೋ ಈ ಬಾರಿಯೂ ಅಷ್ಟೇ ಭಾಷೆಗಳಲ್ಲಿ ಪಶ್ನೆ ಪತ್ರಿಕೆ ಪ್ರಕಟಿಸಲಾಗುವುದು ಎಂದು ಎನ್‌ಟಿಎ ಸ್ಪಷ್ಟಪಡಿಸಿದೆ.

ನೀಟ್ ಪರೀಕ್ಷಾ ವಿಧಾನ ಮಾತ್ರ ಬದಲಾವಣೆಯಾಗಲಿದೆ. ಉಳಿದಂತೆ ಜೆಇಇ ಮೇನ್, ವಿಶ್ವವಿದ್ಯಾಲಯ ಧನಸಹಾಯ ಆಯೋಗ ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಯುಜಿಸಿ-ಎನ್‌ಇಟಿ) ಯಥಾರೀತಿ ನಡೆಯಲಿವೆ.

ಈ ಎಲ್ಲ ಪರೀಕ್ಷೆಗಳು ಆನ್‌ಲೈನ್ ಅಥವಾ ಕಂಪ್ಯೂಟರ್ ಮಾದರಿ ಪರೀಕ್ಷೆಗಳಾಗಿದ್ದು, ಅದರಲ್ಲಿ ಯಾವ ಬದಲಾವಣೆ ಇಲ್ಲ. ಜೆಇಇ ಮೇನ್ ವರ್ಷದಲ್ಲಿ ಎರಡು ಬಾರಿ ನಡೆಯಲಿದೆ.

## ಮೇ 5ರಂದು ನೀಟ್

ಎನ್‌ಟಿಎ ಮಂಗಳವಾರ ಬಿಡುಗಡೆ ಮಾಡಿರುವ ಪರಿಷ್ಕೃತ ವೇಳಾಪಟ್ಟಿಯಂತೆ 2019ರ ಮೇ 5ರಂದು ದೇಶದಾದ್ಯಂತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಒಂದೇ ಬಾರಿಗೆ ನೀಟ್ ನಡೆಯಲಿದೆ.

ನೀಟ್ ಬರೆಯುವ ವಿದ್ಯಾರ್ಥಿಗಳು ಇದೇ ನವೆಂಬರ್ 1ರಿಂದ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಸರು ನೋಂದಣಿಗೆ ನ.30ಕೊನೆಯ ದಿನವಾಗಿದೆ. ಏಪ್ರಿಲ್ 15ರಂದು ಎನ್‌ಟಿಎ ವೆಬ್‌ಸೈಟ್‌ನಿಂದ ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಜೂನ್ 5ರಂದು ಫಲಿತಾಂಶ ಪ್ರಕಟವಾಗಲಿದೆ.

# ನೆಟ್ ನೀಟ್ ವೇಳಾಪಟ್ಟಿ ಪ್ರಕಟ

## ನೀಟ್ ಬಿಟ್ಟು ಉಳಿದವೆಲ್ಲ ಕಂಪ್ಯೂಟರ್ ಆಧಾರಿತ ಪರೀಕ್ಷೆ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮುಂದಿನ ಶೈಕ್ಷಣಿಕ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆಗಳ ವೇಳಾಪಟ್ಟಿ ಬಿಡುಗಡೆ ಮಾಡಿದೆ. ನೆಟ್, ನೀಟ್-ಯುಜಿ, ಜೆಇಇ, ಸಿಮ್ಯಾಟ್ ಹಾಗೂ ಜಿಪ್ಯಾಟ್ ಪರೀಕ್ಷೆಗಳಿಗೆ ಆನ್‌ಲೈನ್ ನೋಂದಣಿಗೆ ಅರ್ಜಿ ಆಹ್ವಾನಿಸಿದೆ.

ನೋಂದಣಿ, ಪ್ರವೇಶ ಪತ್ರ ಡೌನ್‌ಲೋಡ್, ಪರೀಕ್ಷೆ ಹಾಗೂ ಫಲಿತಾಂಶದ ದಿನಗಳ ವಿವರವನ್ನು ಎನ್‌ಟಿಎ ಪ್ರಕಟಿಸಿದೆ. ಎನ್‌ಟಿಎ ರಚನೆಯಾದ ಬಳಿಕ ನಡೆಸುತ್ತಿರುವ ಮೊದಲ ಹಂತದ ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆಗಳು ಇದಾಗಿವೆ.

**» ದೇಶದ 2,697 ಕೇಂದ್ರಗಳಲ್ಲಿ ಉಚಿತ ತರಬೇತಿ**

ನೀಟ್- ಯುಜಿ ಹೊರತು ಪಡಿಸಿ ಜೆಇಇ ಮೇನ್-1, ಮೇನ್-2, ಯುಜಿಸಿ ನೆಟ್, ಸಿಮ್ಯಾಟ್ ಹಾಗೂ ಜಿಪ್ಯಾಟ್ ಪರೀಕ್ಷೆಗಳು ಕಂಪ್ಯೂಟರ್ ಆಧಾರದ ಮೇಲೆ ನಡೆಯುತ್ತವೆ. ವಿದ್ಯಾರ್ಥಿಗಳು ಪೆನ್ನು ಹಾಗೂ ಕಾಗದದ ಬದಲಿಗೆ ಕಂಪ್ಯೂಟರ್ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ. ಈ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕೇಂದ್ರಗಳಲ್ಲಿಯೇ ಉಚಿತ ತರಬೇತಿ ಹಾಗೂ ಮಾದರಿ ಪರೀಕ್ಷೆಯೂ ನಡೆಯಲಿದೆ. ಆದರೆ ಎನ್‌ಟಿಎ ಘೋಷಿಸಿರುವ ಎಲ್ಲ ಪರೀಕ್ಷೆಗಳಿಗೆ ಆಫ್‌ಲೈನ್ ನೋಂದಣಿ ರದ್ದು ಮಾಡಲಾಗಿದ್ದು, ವಿದ್ಯಾರ್ಥಿಗಳು ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಕೊಳ್ಳಬೇಕು.

### ಪರೀಕ್ಷಾ ವೇಳಾಪಟ್ಟಿ

| ಪರೀಕ್ಷೆ | ಪರೀಕ್ಷೆ ಪದ್ಧತಿ | ನೋಂದಣಿ | ಪ್ರವೇಶ ಪತ್ರ | ಪರೀಕ್ಷೆ ದಿನ | ಫಲಿತಾಂಶ |
|---|---|---|---|---|---|
| ನೀಟ್-ಯುಜಿ | ಪೆನ್ ಮತ್ತು ಪೇಪರ್ | ನ.1-30 | 2019ರ ಏ.15 | ಮೇ 5 | ಜೂ.9 |
| ಯುಜಿಸಿ ನೆಟ್ | ಕಂಪ್ಯೂಟರ್ | ಸೆ.1-30 | ನ.19 | ಡಿ.9-23 | 2019ರ ಜ.10 |
| ಜೆಇಇ-ಮೇನ್-1 | ಕಂಪ್ಯೂಟರ್ | ಸೆ.1-30 | ಡಿ.17 | 2019ರ ಜ.6-20 | ಜ.31 |
| ಜೆಇಇ- ಮೇನ್-2 | ಕಂಪ್ಯೂಟರ್ | 2019ರ ಫೆ.8-ಮಾ.7 | ಮಾ.18 | ಏ.6-20 | ಏ.30 |
| ಸಿಮ್ಯಾಟ್, ಜಿಪ್ಯಾಟ್ | ಕಂಪ್ಯೂಟರ್ | ನ.1-30 | 2019ರ ಜ.7 | ಜ.28 | ಫೆ.10 |

ಎನ್‌ಟಿಎ ವೆಬ್‌ತಾಣ(www.nta.ac.in)ದಲ್ಲಿ ವೇಳಾಪಟ್ಟಿಯಲ್ಲಿ ಹೇಳಿರುವ ದಿನದಿಂದ ನೋಂದಣಿ ಪ್ರಕ್ರಿಯೆ, ಪ್ರವೇಶ ಪತ್ರ ಡೌನ್‌ಲೋಡ್‌ಗೆ ಅವಕಾಶ ಸಿಗಲಿದೆ.

**ವಿದ್ಯಾರ್ಥಿಗಳಿಗೆ ಉಚಿತ ತರಬೇತಿ:** ಕಂಪ್ಯೂಟರ್ ಆಧಾರಿತ ಪರೀಕ್ಷೆ ಇರುವ ವಿದ್ಯಾರ್ಥಿಗಳಿಗೆ ದೇಶದ 2697 ಶಾಲಾ- ಕಾಲೇಜುಗಳ ಕಂಪ್ಯೂಟರ್ ಕೇಂದ್ರಗಳಲ್ಲಿ ಉಚಿತ ತರಬೇತಿಗೆ ಅವಕಾಶ ಮಾಡಿಕೊಡಲಾಗಿದೆ. ಸೆ.1ರಿಂದ ಪ್ರತಿ ಶನಿವಾರ ಹಾಗೂ ಭಾನುವಾರ ಉಚಿತ ತರಬೇತಿ ವ್ಯವಸ್ಥೆ ಲಭ್ಯವಾಗಲಿದೆ. ಈ ತರಬೇತಿ ಕೇಂದ್ರ ಹುಡುಕಲು ಪ್ರತ್ಯೇಕ ಆ್ಯಪನ್ನು ಕೂಡ ಬಿಡುಗಡೆ ಮಾಡಲಾಗುತ್ತಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪ್ರಧಾನ ನಿರ್ದೇಶಕ ವಿನೀತ್ ಜೋಶಿ ತಿಳಿಸಿದ್ದಾರೆ.

### ವರ್ಷಕ್ಕೆರಡು ನೀಟ್ ಇಲ್ಲ!

ಗ್ರಾಮೀಣ ವಿದ್ಯಾರ್ಥಿಗಳಿಗೆ ನೆರವು ನೀಡುವ ಉದ್ದೇಶದಿಂದ ವರ್ಷಕ್ಕೆರಡು ನೀಟ್ ಪರೀಕ್ಷೆ ನಡೆಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿತ್ತು. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಪ್ರಕಾರ ಫೆಬ್ರವರಿ, ಮೇನಲ್ಲಿ ನೀಟ್ ನಡೆಸಲು ನಿರ್ಧರಿಸಲಾಗಿತ್ತು. ಜತೆಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸುವುದಾಗಿಯೂ ಹೇಳಿದ್ದರು. ಗ್ರಾಮೀಣ ವಿದ್ಯಾರ್ಥಿಗಳಿಗೆ ಅನಾನುಕೂಲ ಆಗಬಹುದು ಎಂಬ ಆರೋಗ್ಯ ಇಲಾಖೆಯ ಆಕ್ಷೇಪಣೆ ಹಿನ್ನೆಲೆಯಲ್ಲಿ ಕಂಪ್ಯೂಟರ್ ಆಧಾರಿತ ಪರೀಕ್ಷೆ ಕೈಬಿಟ್ಟು, ಹಿಂದಿನ ವ್ಯವಸ್ಥೆ ಮುಂದುವರಿಸಲು ನಿರ್ಧರಿಸಲಾಗಿದೆ. ಆದರೆ ವರ್ಷಕ್ಕೆರಡು ಪರೀಕ್ಷೆ ನಡೆಸುವ ಪ್ರಸ್ತಾವನೆಯಿಂದ ಹಿಂದೆ ಸರಿಯಲು ಕೇಂದ್ರ ಸರ್ಕಾರ ಯಾವುದೇ ಕಾರಣ ನೀಡಿಲ್ಲ.

### ನೆಟ್ ಫಲಿತಾಂಶ ಪ್ರಕಟ

ಕಳೆದ ಜುಲೈನಲ್ಲಿ ನಡೆದ ಯುಜಿಸಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ ಫಲಿತಾಂಶ ಪ್ರಕಟವಾಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲ 55,872 ಅಭ್ಯರ್ಥಿಗಳ ಪಟ್ಟಿಯನ್ನು ಸಿಬಿಎಸ್‌ಇ ವೆಬ್‌ಪುಟದಲ್ಲಿ ಪ್ರಕಟಿಸಲಾಗಿದೆ. ಪರೀಕ್ಷೆಗೆ 84 ವಿಷಯಗಳಲ್ಲಿ 11,48,235 ಅಭ್ಯರ್ಥಿಗಳು ಹಾಜರಾಗಿದ್ದರು.
ಯಶಸ್ವಿ ಅಭ್ಯರ್ಥಿಗಳ ಪಟ್ಟಿ: https://cbsenet.nic.in/CMS/Handler/FileHandler.ashx?i=File&ii=85&iii=Y